ಯಾರೂ ತಿವಿಯುವವರಿಲ್ಲವೆಂದು ಗೊತ್ತಾದ ಮೇಲೆ ಆಗೀಗ ಇಂಥ ಮಾತುಗಳನ್ನು ಸೀತಾಲಕ್ಷ್ಮಿಯ ಜೊತೆ ಹಂಚಿಕೊಳ್ಳುತ್ತಿದ್ದರು ವೆಂಕಮ್ಮ. ತಪ್ಪು ತನ್ನ ಮಗನದಲ್ಲ, ಅವನನ್ನು ಕುಣಿಸುತ್ತಿರುವ ಸೊಸೆಯದು ಎನ್ನುವುದು ಅವರ ನಂಬಿಕೆ, ಹೇಳಿಕೆ. 'ನೀವೊಂದು ಪೆದ್ದು.., ನೀವೊಂದು ಪೆದ್ದು...' ಎನ್ನುವ ಮಾತನ್ನು ಕೇಳಿ ಕೇಳಿ ವೆಂಕಟರಾಮುವಿಗೆ ಹೌದೇನೋ ಅನಿಸತೊಡಗಿದ್ದರೆ ಆಶ್ಚರ್ಯ ಇಲ್ಲ. ಅವತ್ತು ಆಗಿದ್ದೊಂದು ಸಣ್ಣ ಘಟನೆ. ರಾತ್ರಿ ಬಚ್ಚಲುಮನೆಗೆ ಹೋಗಿಯೇ ಮಲಗಿದ್ದು ವೆಂಕಮ್ಮ. ಆದರೆ ಅವರ ಅಂಕೆ ಮೀರಿ ಯಾವುದೋ ಗಳಿಗೆಯಲ್ಲಿ ಹಾಸಿಗೆ ಒದ್ದೆಯಾಗಿಬಿಟ್ಟಿತ್ತು. 'ಹಾಸಿಗೆ ಒದ್ದೆಯಾಯ್ತು' ಅನ್ನುವುದಕ್ಕಿಂತಾ ಸೊಸೆ ಒಂದು ಹೇಳಿ ಒಂದು ಬಿಡುವುದಿಲ್ಲ ಎಂದು ವೆಂಕಮ್ಮ ಹೆದರಿ ಹೋಗಿದ್ದರು. ಅವರು ಅಂದುಕೊಂಡಂತೆಯೇ ಆಗಿತ್ತು. ಬೆಳಿಗ್ಗೆ ಕಾಫಿ ಲೋಟ ತಂದು ಹೊಸ್ತಿಲ ಒಳಗೆ ಇಟ್ಟು ಹೋಗುತ್ತಿದ್ದ ಕನಕ ಅಷ್ಟು ದೂರದಿಂದ ಉಚ್ಚೆಯ ನಾತ ಗ್ರಹಿಸಿಬಿಟ್ಟಳು. ಕಣ್ಣು ಕೆಂಪಾಯ್ತು. ಮುಖ ಉರಿಯತೊಡಗಿತು.

'ಉಚ್ಚೆ ಹುಯ್ಕಂಡಿದೀರಾ?' ಕೇಳಿದಳು ಕನಕ, ಅಸಹನೆ ತುಂಬಿ ತುಳುಕುತ್ತಿದ್ದ ದನಿಯಲ್ಲಿ. ಮಾತಾಡಲಿಲ್ಲ ವೆಂಕಮ್ಮ. ಅವಳ ದನಿಗೆ ಇನ್ನೊಂದು ಸಲ ಅವರಿಗೆ ಉಚ್ಚೆ ಹುಯ್ದುಕೊಳ್ಳುವಂತಾಗಿದ್ದು ಹೌದು.

'ಇನ್ನು ಹಾಸಿಗೇಲಿ ಹೇತ್ಕೊಳ್ಳೋದೊಂದು ಬಾಕಿ. ಸೇವೆ ಮಾಡೋಕೆ ಇಲ್ಲೇನು ದುಡ್ಡು ಕೊಟ್ಟು ಜನ ಇಟ್ಟಿದೀರಾ? ಇದ್ದಿದ್ದೆಲ್ಲಾ ದಾನ ಮಾಡಿ ಬರಿಗೈಲಿ ಬಂದು ಸಾರ್ತಿಯಾಗಿದೀರಿ. ಮುಖ್ಯ ನಮ್ಮಪ್ಪಂಗೆ ಬುದ್ಧಿ ಇಲ್ಲ. ಇದರ ಬದಲು ಬಾವಿಗೆ ದೂಡಿದ್ರೆ ಪರಮಸುಖ ಆಗ್ತಿತ್ತು. ಇಂಥ ಮನೆಗೆ ಕಟ್ಟಿ ಕೈ ತೊಳ್ಕಂಬಿಟ್ಟ ಪುಣ್ಯಾತ್ಮ'.

ಮುಂದುವರಿಯುತ್ತಲೇ ಇತ್ತು ಮಂತ್ರಪುಷ್ಪ. ಅಡುಗೆ ಮನೆಯಲ್ಲಿ ಕೂತು ಕಾಫಿ ಕುಡಿಯುತ್ತಿದ್ದ ವೆಂಕಟರಾಮು ಹೆಂಡತಿಯ ಬಾಯಿ ಕೇಳಿ ಎದ್ದು ಬಂದಿದ್ದ. ಅವನ ಮಕ ನೋಡಿ ಕನಕ ಇನ್ನಷ್ಟು ಬಾಯಿ ಜೋರು ಮಾಡಿದ್ದಳು.

'ನೋಡಿ ಈ ಅವಸ್ಥೇನ. ಕಣ್ಣಲ್ಲಿ ನೋಡೋಕಾಗಲ್ಲ. ಸಣ್ಣ ಮಗೂನಾ ನಿಮ್ಮಮ್ಮ? ಪುಣ್ಯ ಮಾಡಿದೋರು ನುಣ್ಣಗೆ ಬಾಚ್ಕೊಂಡು ಸುಖವಾಗಿದಾರೆ. ನಾನು ಯಾವ ಕರ್ಮ ಮಾಡಿ ಹುಟ್ಟಿದ್ನೋ ಭಗವಂತ ಬಲ್ಲ. ದಿನಾ ನರಕ ಅನುಭೋಗಿಸ್ತಿದೀನಿ...'

ಹೊಟ್ಟೆಗೆ ಸರಿಯಾಗಿ ಕೂಳು ಹಾಕುವುದಕ್ಕೂ ಕೈ ಹಿಡಿತ ಮಾಡುತ್ತಿದ್ದ, ವೆಂಕಮ್ಮನ ತಲೆಗೆ ಯಾವತ್ತೂ ಒಂದು ಚೊಂಬು ನೀರು ಹಾಕದಿದ್ದ, ಅವರ ಕೋಣೆಯೊಳಗೆ ಕಾಲಿಡದಿದ್ದ ಕನಕ ಅದ್ಯಾವ ನರಕ ಅನುಭವಿಸುತ್ತಿದ್ದಳೋ ಅವಳಿಗೇ ಗೊತ್ತು. ಮಧ್ಯ ಸಿಕ್ಕಿ ಹಾಕಿಕೊಂಡವನು ವೆಂಕಟರಾಮು. ಅವನು ಅನಾಮತ್ತಾಗಿ ಅಮ್ಮನನ್ನು ಪಕ್ಕಕ್ಕೆತ್ತಿ ಕೂರಿಸಿ ಮೇಲ್ಹಾಸು ತೆಗೆಯಲು ಹೋದರೆ ಬಿಡಲಿಲ್ಲ ಕನಕ. 'ಅದನ್ನೆಂತಕ್ಕೆ ತೆಗೀತೀರಿ? ಇನ್ನು ಉಚ್ಚೆ ಬಟ್ಟೆ ಒಗೆಯೋ ಸೇವೇನೂ ಮಾಡ್ತೀರಾ? ಎಲ್ಲಾ ತಗೊಂಡ್ಹೋಗಿ ಗೊಬ್ಬರದ ಗುಂಡಿಗೆ ಬಿಸಾಕಿ' ಎಂದು ಅಪ್ಪಣೆಯಾಯ್ತು.

'ರಾತ್ರಿ ಅಮ್ಮಂಗೆ ಮಲಗೋಕೆ ಬೇಡ್ವೇನೆ? ಲೇಪು ಬಿಸಿಲಿಗೆ ಹಾಕ್ತೀನಿ' ಅಂದ ವೆಂಕಟರಾಮು.

'ಬಿಸಿಲಿಗೆ ಹಾಕಿ ಮತ್ತೆ ಹಾಸೋಕೆ ಅದೇನು ಸಣ್ಣ ಮಕ್ಕಳ ಉಚ್ಚೇನಾ? ಗಬ್ಬು ನಾರ್ತಿರುತ್ತೆ ಲೇಪು. ಮೊದಲು ಒಗಾಸಿ...'

'ಮಲಗೋಕೆ...'

'ಕನ್ನಡ ಬರಲ್ಲೇನ್ರೀ ನಿಮ್ಗೆ? ಒಗಾಸಿ ಅಂದ್ರೆ ಒಗಾಸ್ಬೇಕು...' ನಿಮ್ಮಮ್ಮನ್ನೂ ಸೇರಿಸಿ ಅನ್ನಲಿಲ್ಲ ಪುಣ್ಯಾತ್ಗಿತ್ತಿ. ವೆಂಕಮ್ಮ ತಟ್ಟಾಡುತ್ತಾ ಹೋಗಿ ಮೈ ತೊಳೆದುಕೊಂಡು, ಉಟ್ಟ ಸೀರೆ ಒಗೆದುಕೊಂಡು, ಬೇರೆ ಸೀರೆ ಉಟ್ಟುಕೊಂಡು ಬಂದರು. ಮೊಮ್ಮಕ್ಕಳು ಕಿಸಕಿಸ ನಗುತ್ತಿರುವುದನ್ನು ಕಂಡು ಅವರ ಜೀವ ಬಾಯಿಗೆ ಬಂದಂತಾಯ್ತು. ದೇವರೇ, ಈ ಕ್ಷಣ ನಂಗೆ ಸಾವು ಕೊಡು. ಬದುಕೋಕೆ ನಂಗೆ ತಿಲಮಾತ್ರದ ಆಸೇನೂ ಇಲ್ಲ. ಮಗ ಆದ್ರೂ ಸುಖವಾಗಿರ್ಲಿ. ನನ್ನ ದೆಸೆಂದ ದಿನಾ ಅವನು ಬೈಗುಳ ತಿನ್ನೋದು ಬೇಡ... ಅನಿಸಿತ್ತಂತೆ ವೆಂಕಮ್ಮನಿಗೆ. ಪಾಪ, ಮಕ್ಕಳಿಗೇನು ಗೊತ್ತಿರುತ್ತದೆ? ಅಮ್ಮ ಹೇಳಿದ್ದು ಅವಕ್ಕೆ ಪಥ್ಯ. ಇಂಥಾ ಹೊತ್ತಲ್ಲೂ ನಾಲಿಗೆ, ಹೊಟ್ಟೆ ಹೆಂಗೆ ಕೆಲಸ ಮಾಡ್ತಿರುತ್ತೆ ನೋಡು. ಕಾಫಿ ಕುಡಿಯೋಕೆ ಲೋಟ ಕೈಗೆ ತಗಂಡ್ರೆ ತಣ್ಣಗೆ ಕೊರೀತಿತ್ತು ಕಾಫಿ. ನಿಂಗೊತ್ತು, ಬಿಸಿ ಕಾಫಿ ಅಂದ್ರೆ ನಂಗೆ ಜೀವ. ಹಿಂಗಿದ್ದ ಕಾಫಿ ಕುಡಿದು ಯುಗ ಆಗಿತ್ತು... ಅನ್ನುತ್ತಾ ಸೀತಾಲಕ್ಷ್ಮಿ ಕೈಗೆ ಕೊಟ್ಟ ಬಿಸಿ ಕಾಫಿಯ ಲೋಟವನ್ನು ಮಹಾಪ್ರಸಾದ ಎನ್ನುವಂತೆ ಎರಡೂ ಕೈ ನೀಡಿ ತೆಗೆದುಕೊಂಡಿದ್ದರು ವೆಂಕಮ್ಮ, ಒಂದಿಷ್ಟು ಚೇತರಿಸಿಕೊಂಡ ನಂತರದ ಅದೊಂದು ದಿನ.

ವೆಂಕಮ್ಮನಿಗೆ ಹಾಸಿಗೆಯಲ್ಲಿ ಉಚ್ಚೆ ಬಂದಿದ್ದೆಂಬುದು ಅವರ ಪಾಲಿಗೆ ವರವಾಯ್ತು. ಕನಕ ಗಂಡನಿಗೆ ಅದೇನೇನು ಬೋಧನೆ ಮಾಡಿದಳೋ, ಏನೇನು ಬೆದರಿಕೆ ಒಡ್ಡಿದಳೋ, ಅಸಹಾಯಕನಾದ ವೆಂಕಟರಾಮು ಮರುದಿನ ಬೆಳಗಿನ ಜಾವ ಅಮ್ಮ ಮಲಗಿದ್ದ ಗೋಣೀತಾಟಿನ ಸಮೇತ ಅವರನ್ನು ಅಣ್ಣನ ಮನೆಯೆದುರು ಮಲಗಿಸಿ ಹೋಗಿದ್ದ. ಮುಂದಿನ ಪರಿಣಾಮ ಏನೇನಾಗಬಹುದೆಂದು ಗಂಡ–ಹೆಂಡತಿ ಸಮಾಲೋಚನೆ ನಡೆಸಿಯೇ ಇರುತ್ತಾರೆ. ಆದರೆ ಎಷ್ಟೋ ಸಲ ಅಂದುಕೊಂಡಿದ್ದಂತೆ ಆಗದೆ ಅಚ್ಚರಿಯ ಕಡಲಲ್ಲಿ ದೂಕಿಬಿಡುತ್ತದೆ ಬದುಕು. ಸೀತಾಲಕ್ಷ್ಮಿ ಹೇಳಿದ್ದಳು,

'ನಾಳೆ ನಮಗೂ ವಯಸ್ಸಾಗುತ್ತೆ. ಆಗ ನಮ್ಮ ಗತಿ ಎಂತಾಗುತ್ತೋ ಯಾರಿಗೆ ಗೊತ್ತಿರುತ್ತೆ? ಪಾಪ, ಪುಣ್ಯ ಅನ್ನೋದು ಚೂರಾದ್ರೂ ಇರ್ಬೇಕು. ಅದೇ ಇಲ್ದಿದ್ರೆ ಮನುಷ್ರು ಅನ್ನೋಕಾಗುತ್ತಾ?'

'ಮಾರಾಯ್ತೀ, ನಿನ್ನ ಹೊಟ್ಟೆ ತಣ್ಣಗಿರ್ಲಿ' ಅಂದಿದ್ದರು ವೆಂಕಮ್ಮ. ಬುಡಹತ್ತ ಕಡಿದ ಮರ ಕೂಡಾ ಬೇರಿನ ಬುಡದಲ್ಲೆಲ್ಲೋ ಜೀವಸೆಲೆ ಉಳಿಸಿಕೊಂಡು ಮಳೆಹನಿಗಳ ಸಿಂಚನದೊಡನೆ ಭೂಮಿಯಿಂದ ಹೊರಚಾಚಿ ಚಿಗುರೊಡೆದು ನಳನಳಿಸುವಂತೆ ಪೂರ್ತಿ ಹಣ್ಣಾಗಿ ಹೋಗಿದ್ದ ವೆಂಕಮ್ಮ ಸೀತಾಲಕ್ಷ್ಮಿಯ ಪ್ರೇಮಸಿಂಚನದಿಂದ ಹೊಸದಾಗಿ ಚಿಗಿತುಕೊಂಡಿದ್ದರು. ಒನಕೆ ಚಿಗುರಿದಂತೆ ಅಂದರೂ ಆಗಬಹುದೇನೋ.

***

ಶಿವರಾಮ ಅಮ್ಮನನ್ನು ಅಟ್ಟಕ್ಕೇರಿಸಿ ಕೂರಿಸಲಿಲ್ಲ. ಪಾತಾಳಕ್ಕೂ ತುಳಿಯಲಿಲ್ಲ. ಆ ಕಾಲವೇ ಹಾಗೆ. ವಯಸ್ಸಾದವರ ಆರೋಗ್ಯದ ಕುರಿತು ತೀರಾ ಕಾಳಜಿ ವಹಿಸುತ್ತಿರಲಿಲ್ಲ ಮನೆ ಜನ. ಅರವತ್ತು, ಅರವತ್ತೆರಡು ದಾಟಿತು ಅಂದರೆ ಮುದುಕರಾದ ಲೆಕ್ಕ. ಹೆಚ್ಚಿನವರಿಗೆ ತಲೆ ಹಣ್ಣಾಗಿರುತ್ತಿತ್ತು. ಹಲ್ಲು ಉದುರಲು ಶುರು. ವಿಪರ್ಯಾಸ ಅಂದರೆ ಕಣ್ಣಲ್ಲಿ ಪೊರೆ ಬಂದವರನ್ನು ಡಾಕ್ಟರ ಹತ್ತಿರ ಕರೆದುಕೊಂಡು ಹೋಗಿ ಏನಾಗಿದೆಯೆಂದು ತೋರಿಸಿಕೊಂಡು ಬರುವುದಕ್ಕೂ ಉದಾಸೀನ. 'ವಯಸ್ಸಾಯ್ತಲ್ಲ, ಮತ್ತೆ ಹೇಗಿರ್ತಾರೆ?' ಎನ್ನುತ್ತಾ ಎಲ್ಲವನ್ನೂ ವಯಸ್ಸಿನ ಮೇಲೆ ಹಾಕಿದರೆ ಸೈ. ಆ ವಯಸ್ಸಿನಲ್ಲಿ ಗಂಡಸರಿಗೆ ಮೊಮ್ಮಕ್ಕಳು ಹುಟ್ಟಿಯಾಗಿರುತ್ತಿತ್ತು. ಮೂವತ್ತಾರು, ಮೂವತ್ತೇಳಕ್ಕೆ ಹೆಂಗಸರು ದೊಡ್ಡಮ್ಮ ಆಗಿದ್ದರೆ, ಅಂದರೆ ಮೊಮ್ಮಕ್ಕಳ ಅಜ್ಜಿಯಾಗಿದ್ದರೆ ಅದರಲ್ಲಿ ವಿಶೇಷ ಏನಿರುತ್ತಿರಲಿಲ್ಲ. ಮೊಮ್ಮಕ್ಕಳ ಆಟಪಾಠ ನೋಡಿಕೊಂಡು ಶೇಷಜೀವನ ಕಳೆಯುವುದು ಹಿರಿತಲೆಗಳ ಭವಿಷ್ಯ. ಮಹದಾಸೆ ಕೂಡಾ. ಗಂಡಸರೇ ಮೂಲೆಗೆ ಕೂರುವ ಪ್ರಸಂಗದಲ್ಲಿ ಎರಡನೇ ದರ್ಜೆ ಪ್ರಜೆಗಳಾದ ಹೆಂಗಸರ ಕುರಿತಾಗಿ ಯಾವ ಮನೋಧರ್ಮ ರೂಢಿಸಿಕೊಂಡಿರುತ್ತಿದ್ದರು ಅನ್ನುವುದು ಊಹೆಗೆ ಬಿಟ್ಟಿದ್ದು. ಪೇಟೆ ಜನ ಆದರೆ ಎಡವಿ ಬಿದ್ದರೆ ಸಿಗುವ ಡಾಕ್ಟರ ಶಾಪಿಗೆ ಹೋದಾರು. ಅಥವಾ ಮನೆಯವರು ಕರೆದುಕೊಂಡು ಹೋಗಬಹುದು. ಎಲ್ಲಾ ಕಾಯಿಲೆಗಳಿಗೂ ಸರ್ವಜ್ಞರಂತೆ ಒಬ್ಬರೇ ಡಾಕ್ಟರು. ಹೊತ್ತಿಗೆ ಇಂತಿಷ್ಟು; ಎಂದು ಗೆರೆಯ ಗುರುತಿನ ಚೀಟಿ ಅಂಟಿಸಿ ಬಾಟಲಿಗೆ ಔಷಧಿ ತುಂಬಿಸಿಕೊಟ್ಟರೆ ಸೈ. ತಂದಿಟ್ಟುಕೊಂಡಿರುತ್ತಿದ್ದ ಮಾತ್ರೆ ಕೊಡುತ್ತಿದ್ದುದೂ ಅವರೇ. ಇದು ಆ ಕಾಲದ ಚಿಕಿತ್ಸೆಯ ವೈಖರಿ. ಹಳ್ಳಿಯ ಮುದುಕರ ಕೈಲಿ ದುಡ್ಡಿಗೂ ತತ್ವಾರ. ಯಜಮಾನಿಕೆಯನ್ನು ಗಂಡುಮಕ್ಕಳಿಗೆ ವಹಿಸಿಯಾಗಿರುತ್ತಿತ್ತು. ಟ್ರೆಜರಿಯ ಬೀಗದಕೈ ಅವರ ಸುಪರ್ದಿಗೆ ಸೇರಿರುತ್ತಿತ್ತು. ಉಣ್ಣಲು, ತಿನ್ನಲು, ಉಡಲು, ತೊಡಲು ವ್ಯವಸ್ಥೆ ಇದ್ದರೆ ಮತ್ಯಾಕೆ ದುಡ್ಡು? ಒಂದೊಮ್ಮೆ ಕೈಲಿ ದುಡ್ಡಿದ್ದರೂ ಎರಡೋ, ಮೂರೋ ಮೈಲಿ ನಡೆದು ಅಂಗಡಿ ಹುಡುಕಿಕೊಂಡು ಹೋಗಿ ವ್ಯಾಪಾರ ಮಾಡುವಷ್ಟು ಕಾಲಲ್ಲಿ ಬಲ ಇರುತ್ತಿರಲಿಲ್ಲ. ಅವರ ವ್ಯಾಪಾರ ಅಂದರೆ ಏನು? ಬೀಡಿ ಗೀಡಿ, ನಶ್ಯ ಗಿಶ್ಯ, ತಂಬಾಕು ಮುಂತಾದ ಚಟ ಕಲಿತಿದ್ದರೆ ಅದನ್ನು ಅನಿವಾರ್ಯವಾಗಿ ಬಿಟ್ಟು ಹೊಡೆಯಬೇಕಾದ ಪರಿಸ್ಥಿತಿ. ಮನೆ ಮಗ ಈ ವಿದ್ಯೆ ಕಲಿತಿದ್ದರೆ ಪಾಲು ಸಿಗುತ್ತಿತ್ತೇ ವಿನಾ ಇಲ್ಲದಿದ್ದರೆ ಬಲವಂತದ ಪೂರ್ಣವಿರಾಮ.

'ಅತ್ತೇನ ಒಂದ್ಸತಿ ಡಾಕ್ಟರಿಗೆ ತೋರಿಸ್ಬೇಕು' ಅನ್ನಲಿಲ್ಲ ಸೀತಾಲಕ್ಷ್ಮಿ. 'ಕರೆದುಕೊಂಡು ಹೋಗೋಣ' ಎನ್ನುವ ಬುದ್ಧಿ ಶಿವರಾಮನಿಗೆ ಬರಲಿಲ್ಲ. ವೆಂಕಮ್ಮನಿಗೆ ಅದರ ನಿರೀಕ್ಷೆ ಕೂಡಾ ಇರಲಿಲ್ಲ. ಸೀತಾಲಕ್ಷ್ಮಿ ಹೊತ್ತಿಗೆ ಸರಿಯಾಗಿ ಅವರ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದಳು. ಹಾಲು, ತುಪ್ಪ ಎಲ್ಲರಂತೆ ಅವರಿಗೂ ಕೈ